**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ**

**ಸಿ.ಸಿ.ನಂ.19964/2011**

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಸೆಂಟ್ರಲ್ ಆರಕ್ಷಕ ಠಾಣೆ, ಬೆಂಗಳೂರು.

ವಿರುದ್ಧ

ಆರೋಪಿತರ ಹೆಸರುಃ

1. ಕೆ.ಎನ್.ಸಾಮಿಗೌಡ
2. ಹೆಚ್.ಕೃಷ್ಣ
3. ನರಸಿಂಹೇಗೌಡ
4. ಜಿ.ಡಿ.ಚನ್ನಗಿರಿಯಪ್ಪ
5. ಪುಟ್ಟರಾಮಯ್ಯ

**ದೋಷಾರೋಪಣೆ**

ಬೆಂಗಳೂರಿನ 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ಶ್ರೇಯಾಂಶ ದೊಡ್ಡಮನಿ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.

ದೋಷಾರೋಪಣಾ ಪಟ್ಟಿಯ 1 ನೇ ಆರೋಪಿಯಾದ ನೀವು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತದ (ಬಿಬಿಆರ್ ಮತ್ತು ಆರ್ ಡಿಸಿಸಿ) ಕನಕಪುರ ಶಾಖೆಯ ಮೇಲ್ವಿಚಾರಕನಾಗಿ , 2 ನೇ ಆರೋಪಿಯಾದ ನೀವು ಸದರಿ ಬ್ಯಾಂಕಿನ ಪ್ರಭಾರ ಮ್ಯಾನೇಜರ್ ಆಗಿದ್ದು , 3 ನೇ ಆರೋಪಿಯಾದ ನೀವು ಸದರಿ ಸಂಘದ ಅಧ್ಯಕ್ಷನಾಗಿದ್ದು, 4 ನೇ ಆರೋಪಿಯಾದ ನೀವು ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಟಿ.ಹೊಸಹಳ್ಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ / ಸಂಘ ನಿಯಮಿತದ ಕಾರ್ಯದರ್ಶಿ/ವ್ಯವಸ್ಥಾಪಕನಾಗಿದ್ದು, 5 ನೇ ಆರೋಪಿಯಾದ ನೀವು ನಂ.6, 5 ನೇ ಮುಖ್ಯ ರಸ್ತೆ, ಚಾಮರಾಜಪೇಟೆಯಲ್ಲಿರುವ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ಪ್ರಧಾನ ಕಚೇರಿಯ ಯೋಜನೆ ಮತ್ತು ವಿಕಾಸ ವಿಭಾಗದ ಹಿರಿಯ ಶಾಖಾ ವವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಆರೋಪಿತರಾದ ನೀವುಗಳು 2009-10 ನೇ ಸಾಲಿನಲ್ಲಿ ಪರಸ್ಪರ ಜೊತೆ ಸೇರಿ ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರಿ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಸುಳ್ಳು ಸಾಲದ ಅರ್ಜಿಗಳನ್ನು ಆರೋಪಿಗಳಾದ ನೀವೆ ಸ್ವಂತ ಬರವಣಿಗೆಯಲ್ಲಿ

ಭರ್ತಿ ಮಾಡಿ, ಗುಂಪಿನ ಹೆಸರು, ಸುಳ್ಳು ವಿಳಾಸ ಇರುವ ನಕಲಿ ಸೀಲು ಹಾಕಿ ಮಹಿಳಾ ಸದಸ್ಯರ ನಕಲಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ನೀವೇ ಹಾಕಿ ನಕಲಿ ಗುಂಪಿನ ಮಹಿಳೆಯರು ಫೋಟೋಗಳನ್ನು ಲಗತ್ತಿಸಿ ನಿಮ್ಮ ಶಿಫಾರಸ್ಸಿನೊಂದಿಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಎಲ್ಲಾ ಚೆಕ್ಕುಗಳನ್ನು ಸಂಬಂಧಪಟ್ಟ ಮಹಿಳೆಯರಿಗೆ ವಿತರಣೆ ಮಾಡುವುದಾಗಿ ನಂಬಿಸಿ ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಅಕ್ರಮ ಲಾಭಮಾಡಿಕೊಂಡು ಸದರಿ ಬ್ಯಾಂಕಿಗೆ ನಂಬಿಕೆದ್ರೋಹವೆಸಗಿ ಅಕ್ರಮ ನಷ್ಟವನ್ನುಂಟು ಮಾಡಿ ಸದರಿ ಹಣವನ್ನು ನಿಮ್ಮ ಸ್ವಂತಕ್ಕೆ ಬಳಸಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.408 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಎರಡನೇಯದಾಗಿ, ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ಸಾರ್ವಜನಿಕ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ನೌಕರರಾಗಿದ್ದುಕೊಂಡು ನೀವುಗಳು 2009-10ನೇ ಸಾಲಿನಲ್ಲಿ ಪರಸ್ಪರ ಜೊತೆ ಸೇರಿ ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಆರೋಪಿಗಳಾದ ನೀವೆ ಸ್ವಂತ ಬರವಣಿಗೆಯಲ್ಲಿ ಸಾಲದ ಅರ್ಜಿಗಳನ್ನು ಭರ್ತಿ ಮಾಡಿ, ಗುಂಪಿನ ಹೆಸರು, ಸುಳ್ಳು ವಿಳಾಸ ಇರುವ ನಕಲಿ ಸೀಲು ಹಾಕಿ ಮಹಿಳಾ ಸದಸ್ಯರ ನಕಲಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ನೀವೇ ಹಾಕಿ ನಕಲಿ ಗುಂಪಿನ ಮಹಿಳೆಯರು ಫೋಟೋಗಳನ್ನು ಲಗತ್ತಿಸಿ ಸುಳ್ಳು ಸಾಲದ ಅರ್ಜಿಗಳನ್ನು ನಿಮ್ಮ ಶಿಫಾರಸ್ಸಿನೊಂದಿಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಎಲ್ಲಾ ಚೆಕ್ಕುಗಳನ್ನು ಸಂಬಂಧಪಟ್ಟ ಮಹಿಳೆಯರಿಗೆ ವಿತರಣೆ ಮಾಡುವುದಾಗಿ ನಂಬಿಸಿ ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಅಕ್ರಮ ಲಾಭಮಾಡಿಕೊಂಡು ಸದರಿ ಬ್ಯಾಂಕಿನ ಆರ್ಥಿಕ ಸ್ಥಿತಿಯನ್ನು ಬುಡುಮೇಲು ಮಾಡುವಂತ ಸಮಾಜಘಾತುಕ ಕೃತ್ಯದಲ್ಲಿ ತೊಡಗಿ ಸದರಿ ಬ್ಯಾಂಕಿಗೆ ಅಕ್ರಮ ನಷ್ಟವನ್ನುಂಟು ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.409 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಮೂರನೇಯದಾಗಿ, ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ಸಾರ್ವಜನಿಕ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ನೌಕರರಾಗಿದ್ದುಕೊಂಡು ನೀವುಗಳು 2009-10ನೇ ಸಾಲಿನಲ್ಲಿ ಪರಸ್ಪರ ಜೊತೆ ಸೇರಿ ನೀವು ಸದರಿ ಬ್ಯಾಂಕಿಗೆ ಮೋಸ ಮಾಡುವುದು ತಿಳಿದಿದ್ದರೂ ಸಹ

ನೀವುಗಳು ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಸುಳ್ಳು ಸಾಲದ ಅರ್ಜಿಗಳನ್ನು ನಿಮ್ಮ ಶಿಫಾರಸ್ಸಿನೊಂದಿಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಎಲ್ಲಾ ಚೆಕ್ಕುಗಳನ್ನು ಸಂಬಂಧಪಟ್ಟ ಮಹಿಳೆಯರಿಗೆ ವಿತರಣೆ ಮಾಡುವುದಾಗಿ ನಂಬಿಸಿ ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಸದರಿ ಬ್ಯಾಂಕಿನ ಹಿತವನ್ನು ಕಾಪಾಡದೇ ಸದರಿ ಬ್ಯಾಂಕಿಗೆ ಆರ್ಥಿಕ ನಷ್ಟವನ್ನುಂಟು ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.418 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ನಾಲ್ಕನೇಯದಾಗಿ, ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ಸಾರ್ವಜನಿಕ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ನೌಕರರಾಗಿದ್ದುಕೊಂಡು ನೀವುಗಳು 2009-10 ನೇ ಸಾಲಿನಲ್ಲಿ ಪರಸ್ಪರ ಜೊತೆ ಸೇರಿ ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಸುಳ್ಳು ಸಾಲದ ಅರ್ಜಿಗಳನ್ನು ನಿಮ್ಮ ಶಿಫಾರಸ್ಸಿನೊಂದಿಗೆ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಎಲ್ಲಾ ಚೆಕ್ಕುಗಳನ್ನು ಸಂಬಂಧಪಟ್ಟ ಮಹಿಳೆಯರಿಗೆ ವಿತರಣೆ ಮಾಡುವುದಾಗಿ ನಂಬಿಸಿ ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಸದರಿ ಬ್ಯಾಂಕಿಗೆ ಮೋಸ ಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.420 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಐದನೇಯದಾಗಿ, ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ಸಾರ್ವಜನಿಕ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ನೌಕರರಾಗಿದ್ದುಕೊಂಡು ನೀವುಗಳು 2009-10 ನೇ ಸಾಲಿನಲ್ಲಿ ನೀವುಗಳು ಪರಸ್ಪರ ಜೊತೆ ಸೇರಿ ಉದ್ದೇಶಪೂರ್ವಕವಾಗಿ ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರೀ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಸುಳ್ಳು ಸಾಲದ ಅರ್ಜಿಗಳನ್ನು ಆರೋಪಿಗಳಾದ ನೀವೆ ಸ್ವಂತ ಬರವಣಿಗೆಯಲ್ಲಿ ಭರ್ತಿ ಮಾಡಿ, ಗುಂಪಿನ ಹೆಸರು, ಸುಳ್ಳು ವಿಳಾಸ ಇರುವ ನಕಲಿ ಸೀಲು ಹಾಕಿ ಮಹಿಳಾ ಸದಸ್ಯರ ನಕಲಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ನೀವೇ ಹಾಕಿ ನಕಲಿ ಗುಂಪಿನ ಮಹಿಳೆಯರು ಫೋಟೋಗಳನ್ನು ಲಗತ್ತಿಸಿ ನೈಜವಾದ ದಾಖಲೆಗಳೆಂದು ಬಿಂಬಿಸಿ ನಿಮ್ಮ ಶಿಫಾರಸ್ಸಿನೊಂದಿಗೆ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.471 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಆರನೇಯದಾಗಿ, ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ಸಾರ್ವಜನಿಕ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ನೌಕರರಾಗಿದ್ದುಕೊಂಡು ನೀವುಗಳು 2009-10 ನೇ ಸಾಲಿನಲ್ಲಿ ನೀವುಗಳು ಪರಸ್ಪರ ಜೊತೆ ಸೇರಿ ಉದ್ದೇಶಪೂರ್ವಕವಾಗಿ ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರಿ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಸುಳ್ಳು ಸಾಲದ ಅರ್ಜಿಗಳನ್ನು ಆರೋಪಿಗಳಾದ ನೀವೆ ಸ್ವಂತ ಬರವಣಿಗೆಯಲ್ಲಿ ಭರ್ತಿ ಮಾಡಿ, ಗುಂಪಿ ನ ಹೆಸರು, ಸುಳ್ಳು ವಿಳಾಸ ಇರುವ ನಕಲಿ ಸೀಲು ಹಾಕಿ ಮಹಿಳಾ ಸದಸ್ಯರ ನಕಲಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ನೀವೇ ಹಾಕಿ ನಕಲಿ ಗುಂಪಿನ ಮಹಿಳೆಯರು ಫೋಟೋಗಳನ್ನು ಲಗತ್ತಿಸಿ ನಿಮ್ಮ ಶಿಫಾರಸ್ಸಿನೊಂದಿಗೆ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಎಲ್ಲಾ ಚೆಕ್ಕುಗಳನ್ನು ಸಂಬಂಧಪಟ್ಟ ಮಹಿಳೆಯರಿಗೆ ವಿತರಣೆ ಮಾಡುವುದಾಗಿ ನಂಬಿಸಿ ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.473 ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು,

ಏಳನೇಯದಾಗಿ, ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ಸಾರ್ವಜನಿಕ ಬಿಬಿಆರ್ ಮತ್ತು ಆರ್ ಡಿಸಿಸಿ ಬ್ಯಾಂಕಿನ ನೌಕರರಾಗಿದ್ದುಕೊಂಡು ನೀವುಗಳು 2009-10 ನೇ ಸಾಲಿನಲ್ಲಿ ಪರಸ್ಪರ ಜೊತೆ ಸೇರಿ ಅಕ್ರಮ ಲಾಭ ಮಾಡಿಕೊಳ್ಳುವ ಉದ್ದೇಶದಿಂದ ಒಳಸಂಚು ರೂಪಿಸಿ ಅಸ್ತಿತ್ವದಲ್ಲಿರದ ಸುಳ್ಳು ಸ್ತ್ರಿ ಶಕ್ತಿ ಸ್ವ ಸಹಾಯ ಗುಂಪುಗಳನ್ನು ಕಟ್ಟಿ ಸುಳ್ಳು ಸಾಲದ ಅರ್ಜಿಗಳನ್ನು ಆರೋಪಿಗಳಾದ ನೀವೆ ಸ್ವಂತ ಬರವಣಿಗೆಯಲ್ಲಿ ಭರ್ತಿ ಮಾಡಿ, ಗುಂಪಿ ನ ಹೆಸರು, ಸುಳ್ಳು ವಿಳಾಸ ಇರುವ ನಕಲಿ ಸೀಲು ಹಾಕಿ ಮಹಿಳಾ ಸದಸ್ಯರ ನಕಲಿ ಸಹಿ ಮತ್ತು ಹೆಬ್ಬೆಟ್ಟಿನ ಗುರುತುಗಳನ್ನು ನೀವೇ ಹಾಕಿ ನಕಲಿ ಗುಂಪಿನ ಮಹಿಳೆಯರು ಫೋಟೋಗಳನ್ನು ಲಗತ್ತಿಸಿ ನಿಮ್ಮ ಶಿಫಾರಸ್ಸಿನೊಂದಿಗೆ ಸಲ್ಲಿಸಿ ರೂ.1,56,00,000/- ಗಳ ಸಾಲವನ್ನು ಮಂಜೂರು ಮಾಡಿಸಿಕೊಂಡು ಎಲ್ಲಾ ಚೆಕ್ಕುಗಳನ್ನು ಸಂಬಂಧಪಟ್ಟ ಮಹಿಳೆಯರಿಗೆ ವಿತರಣೆ ಮಾಡುವುದಾಗಿ ನಂಬಿಸಿ ಸದರಿ ಹಣವನ್ನು ನೀವೇ ಡ್ರಾ ಮಾಡಿಕೊಂಡು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.120(ಬಿ) ಸಹವಾಚಕ ಕಲಂ 34 ರಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಮೇಲೆ ಹೇಳಿದ ದೋಷಾರೋಪಣೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು ಎಂದು ನಿರ್ದೇಶಿಸುತ್ತೇನೆ.

ಪ್ರಃ1 ನಿಮ್ಮ ಮೇಲಿನ ಆಪಾದನೆ ತಿಳಿಯಿತೆ ?

ಉಃ 1 ನೇ ಆರೋಪಿಃ 2 ನೇ ಆರೋಪಿಃ

3 ನೇ ಆರೋಪಿ 4 ನೇ ಆರೋಪಿಃ

5 ನೇ ಆರೋಪಿಃ

ಪ್ರಃ2 ನಿಮ್ಮ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಉಃ 1 ನೇ ಆರೋಪಿಃ 2 ನೇ ಆರೋಪಿಃ

3 ನೇ ಆರೋಪಿ 4 ನೇ ಆರೋಪಿಃ

5 ನೇ ಆರೋಪಿಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದುಕೊಳ್ಳಲಾಗಿದೆ).

ದಿನಾಂಕಃ03.01.2024 3 ನೇ ಎ.ಸಿ.ಎಂ.ಎಂ., ನ್ಯಾಯಾಲಯ, ಬೆಂಗಳೂರು.